ನಿಯಮ, ಕಾನೂನು ಬಿಟ್ಟು ನಾವು ಏನನ್ನೂ ಮಾಡುವುದಿಲ್ಲ • ಸಭಾಪತಿ ಬಸವರಾಜ ಹೊರಟ್ಟಿ ಸ್ಪಷ್ಟನೆ

# ‘ಸಿಐಡಿ ತನಿಖೆ ಪರಿಷತ್ ವ್ಯಾಪ್ತಿಗೆ ಬರದು’

ಪ್ರಜಾವಾಣಿ ವಾರ್ತೆ



ಬಸವರಾಜ ಹೊರಟ್ಟಿ

ಹುಬ್ಬಳ್ಳಿ: ‘ಸಿ.ಟಿ.ರವಿ ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿಗೆ ಆದೇಶಿಸಿರುವುದು ವಿಧಾನ ಪರಿಷತ್ ವ್ಯಾಪ್ತಿಗೆ ಬರುವುದಿಲ್ಲ. ನಮ್ಮ ನಿಯಮಗಳೇ ಬೇರೆ, ಸರ್ಕಾರದ ನಿಯಮಗಳೇ ಬೇರೆ. ನಮ್ಮ ನಿಯಮ, ಕಾನೂನು ಬಿಟ್ಟು ನಾವು ಏನೂ ಮಾಡುವುದಿಲ್ಲ’ ಎಂದು ಸಭಾಪತಿ ಬಸವರಾಜ ಹೊರಟ್ಟಿ ಸ್ಪಷ್ಟಪಡಿಸಿದರು.

ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಪ್ರಕರಣ ಸಿಐಡಿಗೆ ಆದೇಶಿಸಿರುವುದಾಗಿ ಗೃಹ ಸಚಿವರು ಈಗ ಹೇಳುತ್ತಿದ್ದಾರೆ. ಸ್ಥಳ ಮಹಜರು ಕುರಿತು ಪೊಲೀಸ್ ಕಮಿಷನರ್ ಪತ್ರ ಬರೆದಿದ್ದಾರೆ. ಅಂತಹ ಪರಿಸ್ಥಿತಿ ಎದುರಾದರೆ ನಮ್ಮದೇ ಆದ ನಿಯಮದ ಪ್ರಕಾರ ಅವಕಾಶ ಮಾಡಿಕೊಡುತ್ತೇವೆ. ನಮ್ಮ ಅಧಿಕಾರಿಗಳ ಜೊತೆ ಹಾಗೂ ಅಡ್ವೊಕೇಟ್ ಜನರಲ್, ಪರಿಷತ್‌ನ ಕಾರ್ಯದರ್ಶಿ ಮತ್ತು ಕಾನೂನು ಪಂಡಿತರ ಜೊತೆಯೂ ಚರ್ಚೆ ನಡೆಸುತ್ತಿದ್ದೇನೆ’ ಎಂದರು.

‘ಪ್ರಕರಣ ಸಿಐಡಿಗೆ ವಹಿಸುವಾಗ ಪೊಲೀಸರು ವಿಧಾನ ಪರಿಷತ್‌ನಲ್ಲಿ ನಡೆದ ಘಟನೆ ಎಂದು ಉಲ್ಲೇಖಿಸಿದ್ದು ತಪ್ಪು. ಅದನ್ನು ಪರಿಶೀಲಿಸುತ್ತಿದ್ದೇವೆ. ನಾವು ಈಗಾಗಲೇ ರೂಲಿಂಗ್ ಕೊಟ್ಟು ಪ್ರಕರಣ ಮುಕ್ತಾಯಗೊಳಿಸಿದ್ದೇವೆ. ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಎಂದು ಆರೋಪಿಸಿದ್ದಕ್ಕೆ ಪ್ರಕರಣ ದಾಖಲಾಗಿದೆ. ಕಲಾಪ ಮುಂದೂಡಿದಾಗಲೂ ಅದು ವಿಧಾನ ಪರಿಷತ್ ಆಗಿರುತ್ತದೆ. ಅಲ್ಲಿ ಏನೇ ಆದರೂ, ಏನೇ ಕ್ರಮ ಕೈಗೊಳ್ಳುವುದಿದ್ದರೂ ಸಭಾಪತಿ ಅನುಮತಿ ಪಡೆಯಲೇಬೇಕು’ ಎಂದು ತಿಳಿಸಿದರು.

‘ಲಕ್ಷ್ಮೀ ಹೆಬ್ಬಾಳಕರ ಅವರನ್ನು ಸಚಿವೆಯಾಗಿಯಷ್ಟೇ ಅಲ್ಲ; ಮಹಿಳೆಯಾಗಿಯೂ ನಾವು ನೋಡಬೇಕು. ಅಲ್ಲದೆ, ಸಿ.ಟಿ. ರವಿ ಅವರನ್ನು ಪೊಲೀಸರು ಅಮಾನುಷವಾಗಿ ಎತ್ತಿಕೊಂಡು ಹೋಗಿದ್ದು ತಪ್ಪು. ಸದನದ ಸದಸ್ಯರಾಗಿ ಆ ಕುರಿತು ಅವರು ದೂರು ನೀಡಿದರೆ ಪರಿಶೀಲಿಸಲು ಸಮಿತಿ ಮುಂದೆ ಕರೆಯುತ್ತೇವೆ. ಚರ್ಚಿಸಿ ತಪ್ಪಿ-ತಸ್ಥರೆಂದು ಕಂಡು ಬಂದರೆ ಕ್ರಮ ಕೈಗೊಳ್ಳಲು ಸೂಚಿಸುತ್ತೇವೆ’ ಎಂದರು.

‘ಪ್ರಕರಣ ನಮ್ಮ ವ್ಯಾಪ್ತಿಗೆ ಬಂದಾಗ ತೀರ್ಮಾನ ಕೈಗೊಂಡು ಮುಗಿಸಲಾಗಿತ್ತು. ಅದಕ್ಕಾಗಿ ಮುಗಿದ ಅಧ್ಯಾಯ ಎಂದಿದ್ದು. ಮತ್ತೆ ಹೊಸದಾಗಿ ಲಕ್ಷ್ಮೀ ಹೆಬ್ಬಾಳಕರ ಅಥವಾ ಇನ್ನಾರೇ ದೂರು ನೀಡಿದರೂ ಎಫ್‌ಎಸ್‌ಎಲ್‌ಗೆ ಕಳುಹಿಸಿ, ವರದಿ ಆಧರಿಸಿ ಸಮಿತಿ ಎದುರು ಕರೆಯುತ್ತೇವೆ’ ಎಂದು ಹೇಳಿದರು.

## ‘ಜೋಶಿ ಅಸಮರ್ಥರೆಂದರೆ ಸಮಂಜಸವೇ?’



ಜಿ.ಪರಮೇಶ್ವರ

ಹುಬ್ಬಳ್ಳಿ: ‘ಪ್ರಲ್ಹಾದ ಜೋಶಿ ಅಸಮರ್ಥ ಕೇಂದ್ರ ಸಚಿವ ಎಂದರೆ ಸಮಂಜಸವಾಗುತ್ತದೆಯೇ? ಜೋಶಿ ಅವರಿಗೆ ನನ್ನ ಸಾಮರ್ಥ್ಯ ಗೊತ್ತಿಲ್ಲ’ ಎಂದು ಗೃಹ ಸಚಿವ ಪರಮೇಶ್ವರ ತಿರುಗೇಟು ನೀಡಿದರು.

‘ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ವಿರುದ್ಧ ಪ್ರಕರಣ ದಾಖಲಾದ ನಂತರದ ಬೆಳವಣಿಗೆಯ ಮಾಹಿತಿ ಪಡೆಯುವಲ್ಲಿ ಗೃಹಸಚಿವರು ಅಸಮರ್ಥರಾಗಿದ್ದಾರೆ’ ಎನ್ನುವ ಜೋಶಿ ಹೇಳಿಕೆಗೆ ಅವರು ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದರು.

## ಸಭಾಪತಿ, ಗೃಹ ಸಚಿವರು, ಡಿಜಿಪಿಗೆ ಪತ್ರ

ಇಡೀ ಪ್ರಕರಣದ ಬಗ್ಗೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಗೃಹ ಸಚಿವ ಜಿ.ಪರಮೇಶ್ವರ ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ಸಿ.ಟಿ. ರವಿ ದೂರು ಸಲ್ಲಿಸಿದ್ದಾರೆ.ಸದನದಲ್ಲಿ ನಡೆದ ಘಟನೆ, ಪೊಲೀಸರು ನಡೆಸಿಕೊಂಡ ರೀತಿ ಕುರಿತು ಏಳು ಪುಟಗಳ ದೂರು ಸಲ್ಲಿಸಿದ್ದಾರೆ.

‘ಕಲಾಪ ಮುಂದೂಡಿಕೆಯಾದ ಬಳಿಕ ಪರಿಷತ್ತಿನ ಒಳಗೆ ಮತ್ತು ಹೊರಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಲಕ್ಷ್ಮೀ ಹೆಬ್ಬಾಳಕರ, ಬೋಸರಾಜು, ಪರಿಷತ್ ಸದಸ್ಯರಾದ ನಜೀರ್ ಅಹಮದ್, ಬಸವನಗೌಡ ಬಾದರ್ಲಿ, ಚೆನ್ನರಾಜ ಹಟ್ಟಿಹೊಳೆ ಅವರು ನನಗೆ ಮತ್ತು ನನ್ನ ಕುಟುಂಬಕ್ಕೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಹೊರಗೆ ಬಾ ನೋಡಿಕೊಳ್ಳುತ್ತೇವೆ ಎಂದು ಜೀವ ಬೆದರಿಕೆ ಹಾಕಿದ್ದಾರೆ. ಅವರ ಬೆಂಬಲಿಗರು ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ’ ಎಂದು ವಿವರಿಸಿದ್ದಾರೆ.

**ರವಿ ಅವರನ್ನು ಬಂಧಿಸಿದ ಬಳಿಕ ರಸ್ತೆಯಲ್ಲೇ ಸುತ್ತಾಡಿಸಿದ್ದಾರೆ. ಠಾಣೆಯಲ್ಲಿ ಭದ್ರತೆ ನೀಡಲು ಸಾಧ್ಯವಿಲ್ಲ ಎಂದಾದರೆ ಬೀದಿಯಲ್ಲಿ ಭದ್ರತೆ ಸಾಧ್ಯವೇ?**

**ಎಸ್.ಎಲ್.ಭೋಜೇಗೌಡ**
ವಿಧಾನ ಪರಿಷತ್ ಸದಸ್ಯ

**ಸಭಾಪತಿ ನಿರ್ಧರಿಸುವ ವಿಚಾರದಲ್ಲಿ ಪೊಲೀಸರು ಮಧ್ಯ ಪ್ರವೇಶಿಸಿದ್ದಾರೆ. ಸಭಾಪತಿ ಅಧಿಕಾರದ ಮೇಲೆ, ಪ್ರಜಾಪ್ರಭುತ್ವದ ಮೇಲೆ ನಡೆದ ದಾಳಿ ಎಂದೇ ಹೇಳಬೇಕಾಗುತ್ತದೆ**

**ಆಯನೂರು ಮಂಜುನಾಥ್**
ಕೆಪಿಸಿಸಿ ವಕ್ತಾರ

## ‘ಧರ್ಮಸ್ಥಳಕ್ಕೆ ಬಂದು ಆಣೆ ಮಾಡಲಿ’



ಲಕ್ಷ್ಮೀ ಹೆಬ್ಬಾಳಕರ

ಬೆಳಗಾವಿ: ‘ರಾಮಾಯಣ, ಮಹಾಭಾರತ ಯುದ್ಧಗಳು ನಡೆದಿದ್ದು ಮಹಿಳೆಯನ್ನು ಅಪಮಾನ ಮಾಡಿದ್ದಕ್ಕೆ. ಅಲ್ಲಿ ಅಪಮಾನ ಮಾಡಿದ ಎಲ್ಲರಿಗೂ ಶಿಕ್ಷೆ ಆಗಿದೆ. ಇಲ್ಲಿಯೂ ಆಗುತ್ತದೆ. ಸಿ.ಟಿ .ರವಿ ‘ಆ’ ಮಾತು ಹೇಳಿಲ್ಲ ಎಂದಾದರೆ ಧರ್ಮಸ್ಥಳಕ್ಕೆ ಬಂದು ಆಣೆ, ಪ್ರಮಾಣ ಮಾಡಲಿ. ಆಣೆ ಮಾಡಲು ನಾನೂ ನನ್ನ ಕುಟುಂಬ ಸಮೇತವಾಗಿ ಬರುತ್ತೇನೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಸವಾಲು ಹಾಕಿದರು.

ಮಾಧ್ಯಮದೊಂದಿಗೆ ಮಂಗಳವಾರ ಮಾತನಾಡಿದ ಅವರು, ‘ಸದನದಲ್ಲಿ ನಿಂತು ನಾನು ಅಂಥ ಸುಳ್ಳು ಹೇಳಲು ಆಗುವುದೇ? ಸುಳ್ಳು ಹೇಳಲು ನನಗೇನು ಹುಚ್ಚಾ? ಅವರು ಆ ಪದ ಬಳಸಿದ್ದಕ್ಕೆ ಆಡಿಯೊ, ವಿಡಿಯೊ ದಾಖಲೆ ಇದೆ’ ಎಂದೂ ಹೇಳಿದರು.

‘ಸಿ.ಟಿ.ರವಿ ಅಪಘಾತ ಮಾಡಿದ ವಿಡಿಯೊ ಕೂಡ ನನ್ನ ಬಳಿ ಇದೆ. ಅದಕ್ಕಾಗಿಯೇ ನಾನು ಅವರನ್ನು ‘ಕೊಲೆಗಾರ’ ಅಂದಿದ್ದೇನೆ. ನಾನು ಗಾಂಧಿ ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತಿದ್ದೇನೆ. ಗೋಡ್ಸೆ ಮಾರ್ಗದಲ್ಲಿ ನಡೆಯುವಂಥವಳಲ್ಲ’ ಎಂದರು.

**ಹೀರೋ ಆಗಲು ಹೇಳಿಕೆ:** ‘ಸಿ.ಟಿ. ರವಿ ಮಾತನಾಡಿದ್ದು ದೊಡ್ಡ ತಪ್ಪು. ಅವರಿಗೆ ಬಾಯಿ ಮೇಲೆ ಹಿಡಿತ ಇಲ್ಲ. ಏನೇ ಮಾತನಾಡಿದರೂ ನಾವು ಹೀರೋ ಆಗುತ್ತೇವೆ ಎಂಬ ಚಪಲದಲ್ಲಿ ಮಾತನಾಡಿದ್ದಾರೆ’ ಎಂದು ಶಾಸಕ ವಿನಯ ಕುಲಕರ್ಣಿ ಟೀಕಿಸಿದರು.

## ಆಣೆ ಮಾಡಲು ಸಿ.ಟಿ.ರವಿ ನಿರಾಕರಣೆ



ಸಿ.ಟಿ.ರವಿ

ಚಿಕ್ಕಮಗಳೂರು: ಧರ್ಮಸ್ಥಳಕ್ಕೆ ಬಂದು ಆಣೆ ಮಾಡುವಂತೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು ಹಾಕಿರುವ ಸವಾಲು ಸ್ವೀಕರಿಸಲು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ನಿರಾಕರಿಸಿದರು.

‘ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನನಗೆ ರಾತ್ರಿಯಿಡೀ ಹಿಂಸೆ ನೀಡಿದ ಬಳಿಕ ಆಣೆ ಮಾಡುವುದು ಅಪ್ರಸ್ತುತ. ಅವರು ನನ್ನನ್ನು ಕೊಲೆಗಡುಕ ಎಂದು ಕರೆದಿದ್ದಾರೆ. ಅದನ್ನು ಲಕ್ಷ್ಮೀ ಹೆಬ್ಬಾಳಕರ ಅವರೇ ಒಪ್ಪಿಕೊಂಡಿದ್ದಾರೆ. ಹಾಗಾದರೆ ನಾನು ಯಾರನ್ನು ಕೊಲೆ ಮಾಡಿದ್ದೀನಿ’ ಎಂದು ಪ್ರಶ್ನಿಸಿದರು.

‘ಸೋಮವಾರ ನನ್ನ ಮನೆಗೆ ಬಂದಿದ್ದ ಹಿರಿಯರೊಬ್ಬರು ‘ಕೆಸರು ನಿನ್ನ ಮೇಲೆ ಬಿದ್ದರೂ, ನೀನೇ ಕೆಸರಲ್ಲಿ ಬಿದ್ದರೂ ಸ್ನಾನ ಮಾಡಬೇಕಿರುವುದು ನೀನೇ’ ಎಂದು ಹೇಳಿದರು. ಅಷ್ಟನ್ನೇ ಹೇಳಲು ಬಯಸುತ್ತೇನೆ’ ಎಂದು ಪ್ರತಿಕ್ರಿಯಿಸಿದರು.

‘ಈ ಪ್ರಕರಣವನ್ನು ರಾಜಕೀಯವಾಗಿ ಮತ್ತು ಕಾನೂನಾತ್ಮಕವಾಗಿಯೂ ಎದುರಿಸುತ್ತೇನೆ. ಈಗ ಸಿಐಡಿ ತನಿಖೆಗೆ ಒಪ್ಪಿಸಿದ್ದಾರೆ. ಒತ್ತಡ ಇಲ್ಲದೆ ಕೆಲಸ ಮಾಡುವುದಾದರೆ ಸಿಐಡಿ ತನಿಖೆ ಬೇಕಿಲ್ಲ. ಹಿರೇಬಾಗೇವಾಡಿಯ ಒಬ್ಬ ಪೊಲೀಸ್ ಕಾನ್‌ಸ್ಟೆಬಲ್ ಸಾಕು. ಒತ್ತಡ ಇದ್ದರೆ ಎಲ್ಲೂ ನ್ಯಾಯ ಸಿಗುವುದಿಲ್ಲ’ ಎಂದರು.

‘ಆದ್ದರಿಂದ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ಸಿಐಡಿ ತನಿಖೆ ನಡೆಯಬೇಕು. ಸಿಐಡಿ ತನಿಖೆಯ ಮೇಲುಸ್ತುವಾರಿಯನ್ನು ನ್ಯಾಯಾಧೀಶರಿಗೆ ವಹಿಸಬೇಕು. ಅವರಿಗೇ ವರದಿ ಸಲ್ಲಿಕೆಯಾಗಬೇಕು. ಆಗ ನ್ಯಾಯ ಸಿಗಲಿದೆ, ಸತ್ಯ ಹೊರಗೆ ಬರಲಿದೆ’ ಎಂದು ಹೇಳಿದರು. ತಲೆಗೆ ಕಟ್ಟಿದ್ದ ಬಿಳಿಯ ಬ್ಯಾಂಡೇಜ್ ಅನ್ನು ಅವರು ಮಂಗಳವಾರ ಬಿಚ್ಚಿದ್ದು, ಗಾಯಕ್ಕೆ ಮುಲಾಮು ಹಚ್ಚಿದ್ದರು.

# ರವಿ-ಲಕ್ಷ್ಮೀ ಬಿಕ್ಕಟ್ಟು ಮತ್ತೊಂದು ಹಂತಕ್ಕೆ

## ಸಿಐಡಿಗೆ ಕೊಟ್ಟ ಸರ್ಕಾರ I ರಾಜಭವನಕ್ಕೆ ಬಿಜೆಪಿ ನಿಯೋಗ, ನ್ಯಾಯಾಂಗ ತನಿಖೆಗೆ ಒತ್ತಾಯ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹಾಗೂ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ನಡುವಿನ ಸಂಘರ್ಷ ಮತ್ತೊಂದು ಹಂತ ತಲುಪಿದ್ದು, ಸರ್ಕಾರವು ಈ ಪ್ರಕರಣವನ್ನು ಸಿಐಡಿಗೆ ವಹಿಸುವ ಮೂಲಕ ಪ್ರತಿಷ್ಠೆಯಾಗಿ ಪರಿಗಣಿಸಿದೆ. ಅದೇ ರೀತಿ ಬಿಜೆಪಿಯು ರಾಜ್ಯಪಾಲರ ಮಧ್ಯ ಪ್ರವೇಶ ಬಯಸಿ ರಾಜಭವನದ ಕದತಟ್ಟಿದೆ.

ಇನ್ನೊಂದು ಮಗ್ಗುಲಲ್ಲಿ ಲಕ್ಷ್ಮೀ ಹೆಬ್ಬಾಳ್ಕರ್ ಸರಣಿ ಸಂದರ್ಶನ ನೀಡಿದ್ದು, ಸಿ.ಟಿ.ರವಿ ಅವರನ್ನು ಧರ್ಮಸ್ಥಳದಲ್ಲಿ ಆಣೆ ಪ್ರಮಾಣಕ್ಕೆ ಬರುವಂತೆಯೂ ಸವಾಲು ಹಾಕಿದ್ದಾರೆ. ಒಟ್ಟಾರೆ ಇಡೀ ಪ್ರಕರಣ ಸೇರಿಗೆ ಸವ್ವಾಸೇರು ಎಂಬಂತೆ ಜಟಿಲವಾಗುತ್ತಲೇ ಮುಂದುವರಿದಿದೆ.



**ಸಿಐಡಿಗೆ ಹೊಣೆ:** ಸಿ.ಟಿ. ರವಿ ತಾವು 'ಆ ರೀತಿ' ಹೇಳಿಲ್ಲ ಎನ್ನುತ್ತಾರೆ, ಲಕ್ಷ್ಮೀ ಹೆಬ್ಬಾಳ್ಕರ್ ಪಕ್ಕದಲ್ಲಿದ್ದವರು 'ಆ ಮಾತು' ಆಡಿದ್ದಾರೆ ಎಂದು ಹೇಳುತ್ತಾರೆ. ಹೀಗಾಗಿ ಎಲ್ಲ ವಿಚಾರಗಳ ಬಗ್ಗೆ ತನಿಖೆ ಆಗಲೆಂದೇ ಪ್ರಕರಣವನ್ನು ಸಿಐಡಿಗೆ ಹಸ್ತಾಂತರ ಮಾಡಲಾಗಿದೆ ಎಂದು ಗೃಹ ಸಚಿವ ಜಿ ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ.

ಈ ಮೂಲಕ ಸಿ.ಟಿ.ರವಿ ವಿರುದ್ಧ ದಾಖಲಾಗಿದ್ದ ಪ್ರಕರಣ ಸಿಐಡಿಗೆ ತಕ್ಷಣವೇ ವರ್ಗವಾಗಲಿದ್ದು, ವಿಶೇಷ ತನಿಖಾ ತಂಡ ವಿಚಾರಣೆಗೆ ಆದ್ಯತೆ ನೀಡಲಿದೆ. ಶೀಘ್ರವೇ ದಾಖಲೆ ಸಂಗ್ರಹ ಮಾಡುವುದು ಹಾಗೂ ನಂತರದ ಹಂತದಲ್ಲಿ ಸಿ.ಟಿ.ರವಿ ಅವರನ್ನು ವಿಚಾರಣೆಗೆ ಕರೆಸುವ ಸಾಧ್ಯತೆ ಇದೆ.

**ರಾಜ್ಯಪಾಲರಿಗೆ ದೂರು:** ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರಿಗೆ ರಕ್ಷಣೆ ನೀಡುವಂತೆ ಕೋರಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಬಿಜೆಪಿ ನಿಯೋಗ ಮಂಗಳವಾರ ಸಂಜೆ ಮನವಿ ಸಲ್ಲಿಸಿದೆ. ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ ಬೊಮ್ಮಾಯಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಎನ್.ರವಿಕುಮಾರ್ ಮತ್ತಿತರರಿದ್ದ ತಂಡ, ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ನೀಡಲು ಸರ್ಕಾರಕ್ಕೆ ಸೂಚನೆ ಕೊಡುವಂತೆ ಕೋರಿತು.

**ಆಣೆ ಪ್ರಮಾಣ:** ಸಿ.ಟಿ ರವಿ ಅವರು ಆ ರೀತಿ ಹೇಳಿಲ್ಲ ಅನ್ನೋದಾದರೆ, ಧರ್ಮಸ್ಥಳಕ್ಕೆ ಬಂದು ಆಣೆ, ಪ್ರಮಾಣ ಮಾಡಲಿ. ಆಣೆ ಮಾಡಲಿಕ್ಕೆ ನಾನೂ ನನ್ನ ಕುಟುಂಬ ಸಮೇತವಾಗಿ ಬರುತ್ತೇನೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸವಾಲು ಹಾಕಿದ್ದಾರೆ. ರಾಮಾಯಣ, ಮಹಾಭಾರತ ಆಗಿದ್ದು, ಮಹಿಳೆಯನ್ನು ಅಪಮಾನ ಮಾಡಿದ್ದಕ್ಕೆ. ಅಲ್ಲಿ ಅಪಮಾನ ಮಾಡಿದ ಎಲ್ಲರಿಗೂ ಶಿಕ್ಷೆ ಆಗಿದೆ. ಇಲ್ಲಿಯೂ ಆಗುತ್ತದೆ ಎಂದಿದ್ದಾರೆ. ಆದರೆ ರವಿ ಆಣೆ ಪ್ರಮಾಣದ ಸವಾಲನ್ನು ಒಪ್ಪಿಕೊಳ್ಳದೇ ಹಿಂದೆ ಸರಿದಿದ್ದಾರೆ. ನ್ಯಾಯಾಲಯದಲ್ಲಿಯೇ ಪ್ರಕರಣ ಇತ್ಯರ್ಥವಾಗಲಿ ಎಂದು ಹೇಳಿದ್ದಾರೆ.

ವಿಜಯವಾಣಿ ಚಿತ್ರ



ಮಂಗಳವಾರ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರನ್ನು ಭೇಟಿಯಾಗಿದ್ದ ಬಿಜೆಪಿ ಮುಖಂಡರ ನಿಯೋಗ ಸಿ.ಟಿ. ರವಿ ಪ್ರಕರಣದ ನ್ಯಾಯಾಂಗ ತನಿಖೆಗೆ ಸರ್ಕಾರಕ್ಕೆ ನಿರ್ದೇಶಿಸಲು ಮನವಿ ಮಾಡಿತು.

### ಲಕ್ಷ್ಮೀ ಹೆಬ್ಬಾಳ್ಕರ್ ಕಿಡಿನುಡಿ

1 ಸಿ.ಟಿ ರವಿ ಈ ರೀತಿ ಅಂದಿದ್ದಾರೆ ಎಂದು ನಾನು ನಾಟಕ ಮಾಡುವುದಕ್ಕೆ ಆಗುತ್ತಾ? ಸದನದಲ್ಲಿ ನಿಂತು ಸುಳ್ಳು ಆರೋಪ ಮಾಡೋದಕ್ಕೆ ಆಗುತ್ತಾ? ಸುಳ್ಳು ಹೇಳೋದಕ್ಕೆ ನನಗೇನು ಹುಚ್ಚಾ?

2 ಫ್ರಸ್ಟ್ರೇಟ್ ಅನ್ನುವುದಕ್ಕೂ ಆ ಪದಕ್ಕೂ ವ್ಯತ್ಯಾಸ ಇರಲ್ಲವೇ? ಅವರು ಹೇಳಿರೋದಕ್ಕೆ ಆಡಿಯೋ, ವಿಡಿಯೋ ಎಲ್ಲವೂ ನನ್ನ ಬಳಿ ಸಾಕ್ಷಿ ಇದೆ.

3 ಲಕ್ಷ್ಮಿ ಹೆಬ್ಬಾಳ್ಕರ್‌ನ ನೋಡಿ ಸಾವಿರಾರು ಜನ ರಾಜಕಾರಣಕ್ಕೆ ಬರಲು ಮುಂದಾಗಿದ್ದಾರೆ. ಈಗ ಹೋರಾಟ ಮಾಡಲಿಲ್ಲ ಅಂದರೆ, ನನ್ನ ಆತ್ಮಸಾಕ್ಷಿಗೆ ವಂಚನೆ ಮಾಡಿದಂತೆ ಆಗುತ್ತದೆ.

4 ಸಿ.ಟಿ ರವಿ ಅಪಘಾತ ಮಾಡಿರುವ ವಿಡಿಯೋ ನನ್ನ ಬಳಿಯಿದೆ. ಆದರೆ ನಾನು ಕೊಲೆಗಾರ ಅಂದಿಲ್ಲ ಎಂದು ಹೇಳುತ್ತಿಲ್ಲ. ನನ್ನನ್ನು ಕ್ಷಮಿಸು ಅಂದರೂ ನಾನು ಸಿ.ಟಿ ರವಿಯನ್ನ ಕ್ಷಮಿಸಲ್ಲ.

5 ನಾನು ಗಾಂಧಿ ಹಾಕಿಕೊಟ್ಟಂತಹ ಮಾರ್ಗದಲ್ಲಿ ನಡೆಯುತ್ತಿರುವವಳು. ಗೋಡ್ಸೆ ಮಾರ್ಗದಲ್ಲಿ ನಡೆಯುವಂತಹವರಲ್ಲ.

### ಸಿ.ಟಿ.ರವಿ ಮಾತಿನ ಚಾಟಿ

1 ಲಕ್ಷ್ಮೀ ಹೆಬ್ಬಾಳ್ಕರ್ ಕಣ್ಣೀರಿನಿಂದ ಲಾಭ ಪಡೆಯಬಹುದು ಅಂದುಕೊಂಡಿರಬಹುದು. ತಪ್ಪು ಮುಚ್ಚಿಕೊಳ್ಳಲು ಆ ತಾಯಿ ಸುಳ್ಳುಗಳ ಸರಮಾಲೆಯನ್ನು ಸುರಿಸುತ್ತಿದ್ದಾರೆ.

2 ಅವರ ಕ್ಷಮೆ ಅಗತ್ಯವೂ ಇಲ್ಲ. ಅವರ ಬೆದರಿಕೆಗೆ ನಾನು ಹೆದರುವುದೂ ಇಲ್ಲ. ಹಲ್ಲೆಗೆ ಮುಂದಾದಾಗ ಇದ್ದವರು ಲಕ್ಷ್ಮೀ ಹೆಬ್ಬಾಳ್ಕರ್ ಕಡೆಯವರು. ಯಾರೂ ಅಪರಿಚಿತರಲ್ಲ.

3 ಕಾಂಗ್ರೆಸ್‌ನವರು ತುರ್ತು ಪರಿಸ್ಥಿತಿ ಮನಸ್ಥಿತಿಯಿಂದ ಹೊರಬರಬೇಕು. ಬೆಳಗಾವಿಯನ್ನು ರಿಪಬ್ಲಿಕ್ ಆಗಲು ಜನರೂ ಒಪ್ಪಲ್ಲ. ಆದಕ್ಕೆ ನಾವೂ ಅವಕಾಶ ಕೊಡಲ್ಲ.

4 ಖಾನಾಪುರದಲ್ಲಿ ನಾನು ದೂರು ನೀಡಿದ್ದೇನೆ. ಎಫ್‌ಐಆರ್ ಪ್ರತಿ ನೀಡಿಲ್ಲ. ಬಿಜೆಪಿ, ಕಾಂಗ್ರೆಸ್‌ಗೆ ಪ್ರತ್ಯೇಕ ಕಾನೂನಿಲ್ಲ. ನನ್ನ ದೂರಿಗೂ ಸೂಕ್ತ ಕ್ರಮ ಕೈಗೊಳ್ಳಬೇಕಿತ್ತು.

5 ಗೂಂಡಾಗಳಿಗೆ ಸುವರ್ಣಸೌಧದೊಳಗೆ ಪಾಸ್ ಕೊಟ್ಟಿದ್ದು ಯಾರು? ಅವರು ಓರ್ವ ಪರಿಷತ್ ಸದಸ್ಯನನ್ನು ಸುತ್ತಾಡಿಸಿದ್ದು, ಹಿಂಸೆ ಕೊಟ್ಟಿದ್ದನ್ನು ಆ ಮಹಾತಾಯಿ ಹೇಗೆ ಒಪ್ಪಿಕೊಳ್ಳುತ್ತಾರೆ?

ನಮ್ಮ ಕಾರ್ಯದರ್ಶಿ, ಕಾನೂನು ಪಂಡಿತರು ಚರ್ಚೆ ಮಾಡುತ್ತಿದ್ದಾರೆ. ನಮ್ಮ ಅಧಿಕಾರಿಗಳನ್ನು ಕಳುಹಿಸಿ ಮಹಜರಿಗೆ ಅವಕಾಶ ಕೊಡಬೇಕಾಗುತ್ತೆ. ಕಾನೂನು ವ್ಯಾಪ್ತಿ ಬಿಟ್ಟು ನಾವು ಏನೂ ಮಾಡಲ್ಲ.

I ಬಸವರಾಜ ಹೊರಟ್ಟಿ ವಿಧಾನ ಪರಿಷತ್ ಸಭಾಪತಿ

ಅವರಿವರು ಆರೋಪ ಮಾಡುತ್ತಾರೆ ಎಂದು ನಾವು ಇಲಾಖೆ ನಡೆಸಲ್ಲ. ಈ ಪ್ರಕರಣ ಸಿಐಡಿಗೆ ವಹಿಸಲಾಗಿದೆ. ತನಿಖೆ ನಡೆಯುವಾಗ ನಾವು ಹೇಳಿಕೆಗಳನ್ನು ನೀಡುವುದು ಸರಿಯಲ್ಲ.

I ಜಿ. ಪರಮೇಶ್ವರ ಗೃಹ ಸಚಿವ

## ಇದು ಬಫೂನ್ ಸರ್ಕಾರ

**ಬೆಂಗಳೂರು:** ಇದು ಬಫೂನ್ ಸರ್ಕಾರವಾಗಿದ್ದು, ಇಷ್ಟು ಕೆಟ್ಟದಾಗಿ ಯಾರೂ ಸರ್ಕಾರ ನಡೆಸಿಲ್ಲ. ಸಿ.ಟಿ.ರವಿ ಅವರಿಗೆ ಹೀಗಾದರೆ ಇನ್ನು ಸಾರ್ವಜನಿಕರ ಪಾಡೇನು ಎಂಬ ಪ್ರಶ್ನೆ ಮೂಡುತ್ತದೆ. ಇದು ರಾಜ್ಯ ಸರ್ಕಾರಕ್ಕೆ ಒಂದು ಕಪ್ಪು ಚುಕ್ಕೆಯಾಗಿದೆ. ಅದಕ್ಕಾಗಿ ರಾಜ್ಯಪಾಲರು ಸಂವಿಧಾನವನ್ನು ರಕ್ಷಣೆ ಮಾಡಿ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಲಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಅಶೋಕ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರಿಗೆ ರಕ್ಷಣೆ ನೀಡುವಂತೆ ಕೋರಿ ರಾಜ್ಯಪಾಲರಾದ ಥಾವರ್‌ಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಲಾಗಿದೆ. ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ನೀಡಬೇಕೆಂಬುದು ನಮ್ಮ ಆಗ್ರಹ ಎಂದರು. ಶಾಸಕ ಸಿ.ಟಿ. ರವಿ ಅವರಿಗೆ ಮಾಡಿದ ಅಪಮಾನದ ಬಗ್ಗೆ ರಾಜ್ಯಪಾಲರಿಗೆ ತಿಳಿಸಲಾಗಿದೆ. ಸಿ.ಟಿ. ರವಿ ಅವರಿಗೆ ಮುಸ್ಲಿಂ ಉಗ್ರವಾದಿ ಹಾಗೂ ನಕ್ಸಲರಿಂದ ಬೆದರಿಕೆ ಇದೆ. ಹೀಗಿದ್ದರೂ ಅವರನ್ನು ಕಬ್ಬಿನ ಗದ್ದೆಗೆ ಕರೆದುಕೊಂಡು ಹೋಗಿರುವುದು ಅನುಮಾನ ತಂದಿದೆ. ಒಬ್ಬ ಪೊಲೀಸ್ ಅಧಿಕಾರಿ ಸುರಕ್ಷತೆ ದೃಷ್ಟಿಯಿಂದ ಅವರನ್ನು ಗದ್ದೆಗೆ ಕರೆದೊಯ್ಯಲಾಗಿದೆ ಎಂದು ಹೇಳಿದ್ದಾರೆ. ಅಂದರೆ ಪೊಲೀಸ್ ಠಾಣೆ ಸುರಕ್ಷಿತವಲ್ಲ ಎಂದರ್ಥ. ಪೊಲೀಸ್ ಠಾಣೆ ಸುರಕ್ಷಿತವಲ್ಲ ಎಂದು ಈ ಸರ್ಕಾರ ಜನರಿಗೆ ತಿಳಿಸಿದೆ ಎಂದು ಹೇಳಿದರು. ಘಟನೆ ನಡೆದ ಸಂದರ್ಭದಲ್ಲಿ ಪೊಲೀಸ್ ಆಯುಕ್ತರಿಗೆ ನಿರಂತರವಾಗಿ ಫೋನ್ ಕರೆ ಬರುತ್ತಿತ್ತು. ಇವರಿಗೆ ಮುಖ್ಯಮಂತ್ರಿ ಅಥವಾ ಡಿಸಿಎಂ ಕರೆ ಮಾಡುತ್ತಿದ್ದರೇ ಎಂಬುದು ಗೊತ್ತಾಗಬೇಕು. ಇದರ ತನಿಖೆಯನ್ನು ನಿಷ್ಪಕ್ಷಪಾತವಾಗಿ ಮಾಡಬೇಕು ಎಂದು ಆಗ್ರಹಿಸಿದರು.

### ಮತ್ತೊಂದು ದೂರು ಸಲ್ಲಿಸಿದ ಸಿ.ಟಿ.ರವಿ

ಸದನದ ಕಲಾಪವನ್ನು ಮುಂದೂಡಿದ ಬಳಿಕ ವಿಧಾನಪರಿಷತ್‌ನಲ್ಲಿ ನನ್ನ ಮೇಲೆ ಹಲ್ಲೆ ನಡೆಸಲಾಗಿದೆ. ನಂತರದಲ್ಲಿ ಪೊಲೀಸರು ಇಡೀ ರಾತ್ರಿ ವಾಹನದಲ್ಲಿ ಸುತ್ತಾಡಿಸಿ ನಡೆದುಕೊಂಡ ರೀತಿಯ ವಿವರ ಸಹಿತ ಮತ್ತೊಂದು ದೂರನ್ನು ಸಿ.ಟಿ.ರವಿ ಸಭಾಪತಿ ಬಸವರಾಜ ಹೊರಟ್ಟಿ, ಗೃಹ ಸಚಿವ ಜಿ.ಪರಮೇಶ್ವರ್, ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರಿಗೆ ಸಲ್ಲಿಸಿದ್ದಾರೆ. ಪೊಲೀಸ್ ಕೇಸ್ ಆದ ಮೇಲೆ ಅದೆಲ್ಲವೂ ಅಪ್ರಸ್ತುತ. ಕೇಸ್ ಆಗುವ ಮೊದಲು ಆಣೆ ಪ್ರಮಾಣದ ಬಗ್ಗೆ ಮಾತನಾಡಬಹುದಾಗಿತ್ತು. ಸಿಐಡಿ ತನಿಖೆ ಮಾಡುವುದಾದರೆ ಹಾಲಿ ನ್ಯಾಯಾಧೀಶರ ನೇತೃತ್ವ ಹಾಗೂ ನಿರ್ದೇಶನದಲ್ಲಿ ನಡೆಯಲಿ ಎಂದು ಅವರು ಆಗ್ರಹಿಸಿದ್ದಾರೆ.



# ಸಿಐಡಿ ಒಳಬಿಡುವ ಕುರಿತು ಹೊರಟ್ಟಿ ಚರ್ಚೆ

## ಸಿಐಡಿ ಟೀಂ ತನಿಖೆಗೆ ಇಲ್ಲ ಎನ್ನಲಾಗದು

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

'ಶಾಸಕ ಸಿ.ಟಿ.ರವಿ ಪ್ರಕರಣವನ್ನು ಸಿಐಡಿಗೆ ಕೊಟ್ಟಿರುವುದು ರಾಜ್ಯ ಸರ್ಕಾರದ ನಿರ್ಧಾರ. ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಸ್ಥಳ ಮಹಜರಿಗೆ ಸಿಐಡಿಯನ್ನು ಪರಿಷತ್ ಒಳ ಬಿಡುವ ಕುರಿತು ಚರ್ಚಿಸಿದ್ದೇವೆ. ಅಂಥ ವಾತಾವರಣ ನಿರ್ಮಾಣ ಆದರೆ ಅವಕಾಶ ನೀಡಬೇಕಾಗುತ್ತದೆ' ಎಂದು ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.



ಮಾಧ್ಯಮಗಳ ಜತೆ ಮಾತನಾಡಿದ ಅವರು, 'ಸಿಐಡಿಗೆ ಕೊಟ್ಟಿರುವುದಾಗಿ ಗೃಹ ಸಚಿವರು ಈಗಷ್ಟೇ ಹೇಳಿದರು. ಸಿಐಡಿಗೆ ಕೊಡುವ ಬಗ್ಗೆ ನಮ್ಮನ್ನು ಕೇಳುವುದಕ್ಕೆ ಬರುವುದಿಲ್ಲ. ಸ್ಥಳ ಮಹಜರಿಗೆ ಸಂಬಂಧಪಟ್ಟಂತೆ ಕಾರ್ಯದರ್ಶಿ, ಅಪರ ಕಾರ್ಯದರ್ಶಿ, ಎಜಿ ಅವರೊಂದಿಗೆ ಚರ್ಚೆ ನಡೆಸುತ್ತೇವೆ.

↘ 13

- ರವಿ ಪ್ರಕರಣವನ್ನು ಸಿಐಡಿಗೆ ಕೊಟ್ಟಿರುವುದು ರಾಜ್ಯ ಸರ್ಕಾರದ ನಿರ್ಧಾರ
- ಸಿಐಡಿಗೆ ಪ್ರಕರಣದ ತನಿಖೆ ವಹಿಸುವಾಗ ನನ್ನನ್ನು ಕೇಳಬೇಕಿಲ್ಲ
- ಸಿಐಡಿ ನನ್ನ ವ್ಯಾಪ್ತಿಗೆ ಬರುವುದಿಲ್ಲ
- ಸ್ಥಳ ಮಹಜರಿಗೆ ಅನುಮತಿ ಬಗ್ಗೆ ನಮ್ಮ ಅಧಿಕಾರಿಗಳ ಜತೆ ಚರ್ಚಿಸುವೆ
- ಅನುಮತಿ ಕೊಡಲೇಬೇಕಾದರೆ ಅವಕಾಶ ಮಾಡಿ ಕೊಡಬೇಕಾಗುತ್ತದೆ: ಸಭಾಪತಿ

# ಸಿ.ಟಿ.ರವಿ: ಕ್ರಿಮಿನಲ್ ಕೇಸ್ ತನಿಖೆ ಅಭಾದಿತ

## ಪೊಲೀಸರು ಕ್ರಿಮಿನಲ್ ಕೇಸ್ ತನಿಖೆ ನಡೆಸಲೇಬೇಕು | ಸಿಐಡಿಗೆ ಸಭಾಪತಿ ಸಹಕರಿಸುವುದು ಅನಿವಾರ್ಯ: ಕಾನೂನು ತಜ್ಞರು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮಾಜಿ ಸಚಿವ ಸಿ.ಟಿ.ರವಿ ಅವಾಚ್ಯ ಪದ ಬಳಕೆ ಕೇಸ್ ಮುಕ್ತಾಯ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ್ದಾರೆ. ಆದರೆ, ದೂರು ಪಡೆದು ಪೊಲೀಸರು ನಡೆಸಿರುವ ತನಿಖೆ ಸಮರ್ಪಕವೇ ಅಥವಾ ಅಲ್ಲವೇ ಎಂಬ ಬಗ್ಗೆ ಚಕಾರ ಎತ್ತುತ್ತಿಲ್ಲ. ಹೀಗಾಗಿ ಪೊಲೀಸರ ತನಿಖೆ ಅಥವಾ ಸಿಐಡಿ ತನಿಖೆ ಸಹಜವಾಗಿ ನಡೆಯಲಿದೆ ಎನ್ನುತ್ತಾರೆ ತಜ್ಞರು.

ಏಕೆಂದರೆ, ಕಲಾಪ ಮುಗಿದ ನಂತರ ನಡೆದ ಘಟನೆಗೆ ಸಂಬಂಧಿಸಿ ಪೊಲೀಸರಿಗೆ ನೀಡಿದ ದೂರು ತಮ್ಮ ವ್ಯಾಪ್ತಿಯ ಅತಿಕ್ರಮಣ ಎಂದು ಸಭಾಪತಿ ವಾದಿಸುತ್ತಿಲ್ಲ. ತಜ್ಞರ ಪ್ರಕಾರ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿ ಘಟನೆ ಎಲ್ಲೇ ನಡೆದರೂ (ಸಭಾಪತಿ ವ್ಯಾಪ್ತಿಯೂ ಸೇರಿ) ಪೊಲೀಸರು ತನಿಖೆ ನಡೆಸಬಹುದು ಎಂದು ಸುಪ್ರೀಂ ಕೋರ್ಟ್ ತೀರ್ಪು ಇದೆ. ಸಿ.ಟಿ.ರವಿ ಬಳಸಿದ ಆಕ್ಷೇಪಾರ್ಹ ಪದ ಹೇಳಿಕೆ ಕ್ರಿಮಿನಲ್ ಸ್ವರೂಪದ್ದಾಗಿದೆ. ಈ ಎರಡು ಕಾರಣಗಳಿಗಾಗಿ ಪೊಲೀಸರ ತನಿಖೆಗೆ ಯಾವುದೇ ಚ್ಯುತಿ ಬರುವಂತಿಲ್ಲ ಎಂಬುದು ತಜ್ಞರ ಅಭಿಪ್ರಾಯ.



ಇನ್ನು ಪ್ರಕರಣವನ್ನು ಸರ್ಕಾರ ಸಿಐಡಿಗೆ ವಹಿಸಿದಾಗ ಅದಕ್ಕೆ ಸಭಾಪತಿ ಸಹಕಾರ ನೀಡಬೇಕಾಗುತ್ತದೆ ಎಂದೇ ತಜ್ಞರು ಹೇಳುತ್ತಾರೆ. ಇದಕ್ಕೆ ಪೂರಕವಾಗಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿರುವ ಸಭಾಪತಿ ಹೊರಟ್ಟಿ ಅವರು ಈ ಪ್ರಕರಣ ಸಿಐಡಿಗೆ ನೀಡಿರುವುದು ಸರ್ಕಾರದ ತೀರ್ಮಾನ, ಅನಿವಾರ್ಯವಾದರೆ ಮಹಜರಿಗೆ ಅವಕಾಶ ನೀಡುವುದಾಗಿಯೂ ಹೇಳಿದ್ದಾರೆ.

ಸದ್ಯ ಲಕ್ಷ್ಮೀ ಹೆಬ್ಬಾಳ್ಕರ್ ಅವರು ನೀಡಿರುವ ದೂರು ದಾಖಲಿಸಿಕೊಂಡಿರುವ ಪೊಲೀಸರು ರವಿ ವಿರುದ್ಧ ಲೈಂಗಿಕ ಸನ್ನೆ, ಲೈಂಗಿಕ ಕಿರುಕುಳ ಆರೋಪ ಹೊರಿಸಿದ್ದಾರೆ. ಜತೆಗೆ ಸುವರ್ಣಸೌಧ ಆವರಣದೊಳಗೆ ರವಿ ವಿರುದ್ಧ ಗುಂಪೊಂದು ನಡೆಸಿದ ಹಲ್ಲೆ ಯತ್ನದ ಸಂಬಂಧ ಗಲಭೆ, ಶಾಂತಿ ಉಲ್ಲಂಘನೆ, ಕ್ರಿಮಿನಲ್ ಬೆದರಿಕೆ ಸೇರಿ ಆರು ಆರೋಪ ಹೊರಿಸಲಾಗಿದೆ.


ಅವಾಚ್ಯ ಶಬ್ದ ಸಂಬಂಧ ಸಿಐಡಿ ಪೊಲೀಸರಿಗೆ ಖಾಸಗಿ ವಾಹಿನಿಗಳಲ್ಲಿ ದಾಖಲಾಗಿರುವ ವಿಡಿಯೋ ಆಧರಿಸಿ ತನಿಖೆ ಮಾಡುವುದೊಂದೇ ಸದ್ಯಕ್ಕೆ ಇರುವ ದಾರಿ, ಉಳಿದಂತೆ ಘಟನೆ ಸಂದರ್ಭದಲ್ಲಿ ಇದ್ದವರ ಸಾಕ್ಷಿ ಆಧರಿಸಿ ತನಿಖೆ ಮಾಡಬೇಕಾಗಿದೆ. ರವಿ ಆಡಿರುವ ಮಾತಿನ ವಿಡಿಯೋದ ಎಫ್ಎಸ್ಎಲ್ ವರದಿ ಪಡೆದ ನಂತರವೇ ಪ್ರಕರಣದ ವಿಚಾರಣೆಯ ಸ್ವರೂಪ ಬದಲಾಗಬಹುದು ಎಂದು ತಜ್ಞರು ಹೇಳಿದರು.

**ಮಹಜರಿಗೆ ಕೋರಿ ಪತ್ರ:** ಘಟನೆ ಸದನದೊಳಗೆ ನಡೆದಿರುವುದರಿಂದ ಸಿಐಡಿ ಅಧಿಕಾರಿಗಳು ಮಹಜರು ಮಾಡಲು ಅನುಮತಿ ಕೋರಿ ವಿಧಾನ ಪರಿಷತ್ ಕಾರ್ಯದರ್ಶಿಗೆ ಪತ್ರ ಬರೆಯಬೇಕಾಗುತ್ತದೆ. ಇದಕ್ಕೆ ಪೂರಕವಾಗಿ ಬೇರೆ ರಾಜ್ಯಗಳಲ್ಲಿ ಇಂಥ ಸ್ವರೂಪದ ಘಟನೆ ನಡೆದಾಗ ಮಹಜರು ನಡೆದಿರುವ ಬಗ್ಗೆ ಮಾಹಿತಿ ನೀಡಬೇಕಾಗುತ್ತದೆ. ಒಟ್ಟಾರೆ ಇಡೀ ಪ್ರಕರಣದ ತನಿಖೆ ಶುರುವಾಗಲು ಕೆಲ ಕಾಲ ಹಿಡಿಯಲಿದೆ.

# ಸಿಐಡಿಗೆ ಕಠಿಣ ಸವಾಲು

## ಅನುಮತಿ ಪರಿಶೀಲನೆ: ಸಭಾಪತಿ ಹೊರಟ್ಟಿ

**ಹುಬ್ಬಳ್ಳಿ:** ಎಂಎಲ್ಸಿ ಸಿ.ಟಿ. ರವಿ ಪ್ರಕರಣವನ್ನು ಸರಕಾರ ಸಿಐಡಿ ತನಿಖೆ ವಹಿಸಿದೆ. ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ, ಸ್ಥಳ ಮಹಜರಿಗೆ ಪರಿಷತ್ ಅವಕಾಶ ಕೊಡುವ ಕುರಿತು ಚರ್ಚಿಸಲಾಗುವುದು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.



ನಗರದಲ್ಲಿ ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ''ಪ್ರಕರಣವನ್ನು ಸಿಐಡಿಗೆ ಕೊಟ್ಟಿರುವುದಾಗಿ ಗೃಹ ಸಚಿವರು ಸಹ ಹೇಳಿದ್ದಾರೆ. ಸಿಐಡಿಗೆ ಕೊಡುವ ಬಗ್ಗೆ ನಮ್ಮನ್ನು ಕೇಳುವ ಅಗತ್ಯ ಇಲ್ಲ. ಸ್ಥಳ ಮಹಜರಿಗೆ ಸಂಬಂಧಿಸಿ ಕಾರ್ಯದರ್ಶಿ, ಹೆಚ್ಚುವರಿ ಕಾರ್ಯದರ್ಶಿ, ಎಜಿ ಅವರೊಂದಿಗೆ ನಾನು ಚರ್ಚೆ ನಡೆಸುತ್ತೇನೆ,'' ಎಂದರು.

''ನಮಗೆ ಕೊಟ್ಟಿರುವ ಎರಡು ದೂರುಗಳನ್ನು ಪೊಲೀಸರಿಗೆ ಕೊಟ್ಟಿದ್ದೇವೆ. ಸಿಐಡಿ ನಮ್ಮ ವ್ಯಾಪ್ತಿ ಮೀರಿದ್ದು. ನಮ್ಮ ನಿಯಮವೇ ಬೇರೆ. ರಾಜ್ಯ ಸರಕಾರದ ನಿಯಮಗಳು ಬೇರೆ,'' ಎಂದರು.

**ಪರಿಷತ್ ಎಂದು ಬರೆದಿರುವುದು ತಪ್ಪು**

''ಮುಗಿದು ಹೋದ ಅಧ್ಯಾಯ ಎಂದು ನಾವು ತೀರ್ಮಾನ ಮಾಡಿದ್ದು ನಮ್ಮ ನಿಯಮದ ಪ್ರಕಾರ. ನಾವು ರೂಲಿಂಗ್ ಕೊಟ್ಟ ಮೇಲೆ ಮುಗಿಯಿತು. ಸಿಐಡಿಗೆ ರೆಫರೆನ್ಸ್ ಕೊಡುವಾಗ ವಿಧಾನ ಪರಿಷತ್ ಎಂದು ಬರೆದಿರುವುದು ತಪ್ಪು. ಹೀಗೆ ಪೊಲೀಸರು ಬರೆಯಬಾರದಿತ್ತು. ನಾವು ರೂಲಿಂಗ್ ಕೊಟ್ಟು ಕ್ಲೋಸ್ ಮಾಡಿದ್ದೀವಿ,'' ಎಂದರು.

''ನಮಗೆ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಎಂದು ಕೇಸ್ ಕೊಟ್ಟಿದ್ದಾರೆ. ಅದರ ಮೇಲೆ ಕೇಸ್ ಆಗಿದೆ,'' ಎಂದ ಅವರು, ''ಕಲಾಪ ಮುಂದೂಡಿದ್ದರೂ ಅದು ವಿಧಾನ ಪರಿಷತ್‌ನಲ್ಲೇ ಆಗಿರುತ್ತದೆ. ಅಲ್ಲಿ ಏನೇ ಆದರೂ ನಮ್ಮ ಅನುಮತಿ ಪಡೆಯಬೇಕು. ವಿಧಾನ ಪರಿಷತ್ ನಮ್ಮ ಕಸ್ಟಡಿಯಲ್ಲೇ ಇರುತ್ತದೆ,'' ಎಂದರು.

**ಮತ್ತೊಂದು ದೂರು ಕೊಟ್ಟಿಲ್ಲ**

''ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ನನಗೆ ಮತ್ತೊಂದು ದೂರು ಕೊಟ್ಟಿಲ್ಲ, ಕೊಟ್ಟರೆ ಅದನ್ನು ಪರಿಶೀಲಿಸುತ್ತೇನೆ. ಎರಡು ಕಡೆ ಯೋಚನೆ ಮಾಡಬೇಕು. ಹೆಬ್ಬಾಳಕರ್ ಒಬ್ಬ ಮಂತ್ರಿ ಅಲ್ಲ, ಮಹಿಳೆಯಾಗಿ ನಾವು ನೋಡಬೇಕು. ಇನ್ನು ಸಿ.ಟಿ.ರವಿ ಅವರನ್ನು ಅಮಾನುಷವಾಗಿ ಎಳೆದುಕೊಂಡು ಹೋಗಿದ್ದು ಸಹ ತಪ್ಪು,'' ಎಂದರು.

''ನನ್ನ ಮೇಲೆ ಯಾರು ಒತ್ತಡ ಹಾಕುವುದಕ್ಕೆ ಸಾಧ್ಯವಿಲ್ಲ. ರಾಜ್ಯಪಾಲರು ಮಾಹಿತಿ ಕೇಳಿದ್ದರು. ನಾನು ಕೊಟ್ಟಿದ್ದೇನೆ,'' ಎಂದು ಪ್ರತಿಕ್ರಿಯಿಸಿದರು.

### ರಾಜ್ಯಪಾಲರಿಗೆ ಮಾಹಿತಿ

**ಬೆಂಗಳೂರು:** ರಾಜ್ಯಪಾಲರು ಸಭಾಪತಿಗಳಿಂದ ಆ ದಿನದ ಘಟನಾವಳಿ ಬಗ್ಗೆ ಮಾಹಿತಿ ಪಡೆದಿರುವುದು ಗಮನಾರ್ಹ. ರಾಜ್ಯಪಾಲರ ಸೂಚನೆಯಂತೆ ರಾಜಭವನದ ಅಧಿಕಾರಿಯೊಬ್ಬರು ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಸಂಪರ್ಕಿಸಿ ಡಿ.19ರ ಘಟನಾವಳಿ ಬಗ್ಗೆ ಮಾಹಿತಿ ಕೋರಿದ್ದಾರೆ. ಈ ವಿಚಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದ ಸಭಾಪತಿಗಳು ನಂತರ ರಾಜಪಾಲರಿಗೆ ಸಂಪೂರ್ಣ ವಿವರ ನೀಡಿದ್ದಾರೆ. ಡಿ.19ರಂದು ಬೆಳಗ್ಗೆ ಕಲಾಪ ಆರಂಭವಾದಾಗಿನಿಂದ ಅನಿರ್ದಿಷ್ಟಾವಧಿಗೆ ಮುಂದೂಡಿಕೆಯಾಗುವವರೆಗೆ ಆಗಿರುವ ಘಟನಾವಳಿ ಬಗ್ಗೆ ಸಂಪೂರ್ಣ ಮಾಹಿತಿ ಹಂಚಿಕೊಂಡಿದ್ದಾರೆ. ಬಳಿಕ ಸಭಾಪತಿಗಳೊಂದಿಗೆ ದೂರವಾಣಿ ಕರೆಯಲ್ಲಿ ಮಾತನಾಡಿದ ರಾಜ್ಯಪಾಲರು ಸದನವನ್ನು ನಡೆಸಿದ ಬಗೆ ಹಾಗೂ ಆರೋಪ ಪ್ರಕರಣವನ್ನು ನಿಯಮಾನುಸಾರ ಇತ್ಯರ್ಥಪಡಿಸಲು ನಡೆಸಿದ ಪ್ರಯತ್ನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

# ಸಿ.ಟಿ.ರವಿ ಕೇಸ್ ಸಿಐಡಿ ತನಿಖೆಗೆ

## ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್‌ಗೆ ಎಂಎಲ್‌ಸಿ ರವಿ ಅಶ್ಲೀಲ ಪದ ಬಳಕೆ ಕೇಸ್: ಸಮಗ್ರ ತನಿಖೆಗಾಗಿ ಸಿಐಡಿಗೆ ವರ್ಗ

## ರಾಜ್ಯ ಸರ್ಕಾರದಿಂದಲೇ ಅಧಿಕತ ಆದೇಶ | ಸಿಐಡಿ ಎಡಿಜಿಪಿ ಬಿ.ಕೆ.ಸಿಂಗ್ ನೇತೃತ್ವದ ತಂಡಕ್ಕೆ ತನಿಖೆ ಹೊಣೆ?

■ **ಉದಯವಾಣಿ ಸಮಾಚಾರ**

**ಹುಬ್ಬಳ್ಳಿ/ಬೆಂಗಳೂರು:** ರಾಜ್ಯದಲ್ಲಿ ಭಾರೀ ವಿವಾದದ ಕಿಚ್ಚು ಹೊತ್ತಿಸಿರುವ 'ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅಶ್ಲೀಲ ಪದ ಬಳಕೆ ಪ್ರಕರಣ' ಇದೀಗ ಹೊಸ ಮಜಲು ತಲುಪಿದೆ. ಈವರೆಗೆ ಪೊಲೀಸರು ಹಾಗೂ ಪರಿಷತ್ ಸಭಾಪತಿ ಅಂಗಳದಲ್ಲೇ ಸುತ್ತುಹಾಕುತ್ತಿದ್ದ ಈ ಪ್ರಕರಣ ಈಗ ಮತ್ತೊಂದು ತಿರುವು ಪಡೆದುಕೊಂಡಿದ್ದು ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಿರುವುದಾಗಿ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಮಂಗಳವಾರ ಘೋಷಿಸಿದ್ದಾರೆ.

ಇದರ ಬೆನ್ನಲ್ಲೇ ರಾಜ್ಯ ಸರ್ಕಾರದಿಂದ ಅಧಿಕೃತ ಆದೇಶವೂ ಹೊರಬಿದ್ದಿದೆ. ಸದ್ಯದಲ್ಲೇ ವಿಶೇಷ ತನಿಖಾ ತಂಡ ರಚನೆ ಆಗುವ ಸಾಧ್ಯತೆ ಇದೆ. ▶ 14ನೇ ಪುಟಕ್ಕೆ

### ನಿಯಮ ನೋಡಿ ಸ್ಥಳ ಮಹಜರಿಗೆ ಅವಕಾಶ



"ಸರ್ಕಾರ ಪ್ರಕರಣ ಸಿಐಡಿಗೆ ವಹಿಸುವಾಗ ಪೊಲೀಸರು 'ವಿಧಾನ ಪರಿಷತ್‌ನಲ್ಲಿ ನಡೆದ ಘಟನೆ' ಎಂದು ಉಲ್ಲೇಖಿಸಿದ್ದು ತಪ್ಪು. ಅದನ್ನು ಪರಿಶೀಲಿಸುತ್ತಿದ್ದೇವೆ. ಸ್ಥಳ ಮಹಜರು ಪರಿಸ್ಥಿತಿ ಎದುರಾದರೆ ನಮ್ಮದೇ ನಿಯಮದ ಪ್ರಕಾರ ಅವಕಾಶ ಮಾಡಿಕೊಡುತ್ತೇವೆ.

● ಬಸವರಾಜ ಹೊರಟ್ಟಿ, ಸಭಾಪತಿ

### ಲಕ್ಷ್ಮೀ ಹೆಬ್ಬಾಳ್ಕರ್-ಸಿ.ಟಿ.ರವಿ ಆಣೆ-ಪ್ರಮಾಣ ಜಟಾಪಟಿ

#### ಧರ್ಮಸ್ಥಳದಲ್ಲಿ ಆಣೆ ಮಾಡಿ



"ಸಿ.ಟಿ.ರವಿ ನನ್ನ ಬಗ್ಗೆ ಅಶ್ಲೀಲ ಪದ ಬಳಸಿಲ್ಲ ಎಂದಾದರೆ ಧರ್ಮಸ್ಥಳ ಮಂಜುನಾಥನ ಸನ್ನಿಧಾನಕ್ಕೆ ಬರಲಿ, ನಾನೂ ಬರುತ್ತೇನೆ. ಆಣೆ ಪ್ರಮಾಣ ಮಾಡೋಣ. ರಾಜಕಾರಣದ ಸ್ಟಂಟ್ ನನಗೆ ಬೇಕಾಗಿಲ್ಲ. ಮಾಡಬಾರದನ್ನು ಮಾಡಿ ಬಿಜೆಪಿ ನಾಯಕರೇ ವಿಜೃಂಭಿಸುತ್ತಿದ್ದಾರೆ.

● ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

VS

#### ಕೆಸರಿನಿಂದ ದೂರವಿರುವೆ



"ಕೇಸ್ ಆದ ಮೇಲೆ ಎಲ್ಲವೂ ಅಪ್ರಸ್ತುತ. ಮೊದಲೇ ಆಣೆ ಬಗ್ಗೆ ಮಾತನಾಡಬಹುದಿತ್ತು. ಈಗ ಅದು ಮುಗಿದ ಕಥೆ. ನನ್ನ ಮೇಲೆ ಕೆಸರು ಬಿದ್ದರೂ, ಕೆಸರಿನ ಮೇಲೆ ನಾನು ಬಿದ್ರೂ ನಾನೇ ಸ್ನಾನ ಮಾಡಬೇಕು. ಹೀಗಾಗೇ ದೊಡ್ಡವರು, 'ಕೆಸರಿನಿಂದ ನೀನೇ ಸ್ವಲ್ಪ ದೂರ ಇದ್ದು ಬಿಡು' ಎಂದಿದ್ದಾರೆ.

● ಸಿ.ಟಿ.ರವಿ, ಪರಿಷತ್ ಸದಸ್ಯ

### ನ್ಯಾಯಾಂಗ ತನಿಖೆಗೆ ವಹಿಸಿ: ಗೌರ್ನರ್‌ಗೆ ಬಿಜೆಪಿ ಮನವಿ

**ಬೆಂಗಳೂರು:** ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರಿಗೆ ರಕ್ಷಣೆ ನೀಡುವುದರ ಜತೆಗೆ ಬಂಧನೋತ್ತರ ವಿದ್ಯಮಾನದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಬಿಜೆಪಿ ನಿಯೋಗ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದೆ. ▶ ವಿವರ: 5

**ಸಭಾಪತಿ, ಗೌರ್ನರ್, ಡಿಜಿಗೆ ಸಿ.ಟಿ. ರವಿ 7 ಪುಟಗಳ ದೂರು ಸಲ್ಲಿಕೆ** » 5

# ಮೇಲ್ಮನೆಗೆ ನಾನೇ ಫೈನಲ್. ನನ್ನ ಹಕ್ಕುಚ್ಯುತಿ ಬಗ್ಗೆ ಕಾನೂನು ತಜ್ಞರ ಜತೆ ಸಮಾಲೋಚನೆ ನಡೆಸಿ ಕ್ರಮ ಕೈಗೊಳ್ಳುತ್ತೇನೆ...

**ನನಗೆ ತಿಳಿದಂತೆ ಪೊಲೀಸರು ಸದನಕ್ಕೆ ಬರುವಂತಿಲ್ಲ । ಈ ಬಗ್ಗೆ ಮತ್ತೊಮ್ಮೆ ಚರ್ಚಿಸುತ್ತೇನೆ । ಘಟನೆ ವೇಳೆ ನಾನು ಇದ್ದಿದ್ದರೆ ಹೀಗಾಗುತ್ತಿರಲಿಲ್ಲ**

**ವಿವಾದದಲ್ಲಿ ಒಬ್ಬರು ವಿಧಾನಸಭೆ ಸದಸ್ಯರಿದ್ದಾರೆ । ಹಾಗಾಗಿ, ಹಕ್ಕುಬಾಧ್ಯತಾ ಸಮಿತಿ ಪರಿಶೀಲನೆಗೆ ನೀಡಿದ್ದು ಆ ಸದನ ಮುಖ್ಯಸ್ಥರ ನಿರ್ಧಾರ**

**ಉದಯವಾಣಿ ಸಂದರ್ಶನ**

■ ವಿಜಯಕುಮಾರ ಚಂದರಗಿ

ನೇರಾ ನೇರ

ಇದು ಖಡಕ್ ಮಾತು

ಬೆಳಗಾವಿ ಚಳಿಗಾಲದ ಅಧಿವೇಶನ ಮುಗಿದು ವಾರವಾಗುತ್ತಾ ಬಂದರೂ ಸಿ.ಟಿ. ರವಿ ಹೇಳಿದ್ದಾರೆನ್ನಲಾಗಿರುವ ಅಶ್ಲೀಲ ಪದ ಸೃಷ್ಟಿಸಿದ ವಿವಾದದ ಕಿಚ್ಚು ಮಾತ್ರ ಇನ್ನೂ ಧಗಧಗಿಸುತ್ತಿದೆ. ಘಟನೆಗೆ ಸಂಬಂಧಿಸಿದಂತೆ ವಿಧಾನ ಪರಿಷತ್ ಸಭಾಪತಿ ತಮ್ಮ ನಿರ್ಧಾರ ಪ್ರಕಟಿಸಿದ ನಂತರವೂ ನಡೆದ ಹಲವು ಬೆಳವಣಿಗೆಗಳು ಆ ವಿವಾದದ ಸುತ್ತ ಗಿರಕಿ ಹೊಡೆಯುತ್ತಿವೆ. ಒಂದೆಡೆ, ವಿಧಾನಸಭಾ ಅಧ್ಯಕ್ಷರು ಇದೇ ಘಟನೆಯನ್ನು ಹಕ್ಕುಬಾಧ್ಯತಾ ಸಮಿತಿಗೆ ನೀಡಿದ್ದಾರೆ. ಮತ್ತೊಂದೆಡೆ ಪೊಲೀಸರು, ಘಟನಾ ಸ್ಥಳದ ಅಂದರೆ ಮೇಲ್ಮನೆಯ ಮಹಜರು ಮಾಡಲು ನಿರ್ಧರಿಸಿದ್ದಾರೆ. ಇದೆಲ್ಲದರ ನಡುವೆ ಇಡೀ ಮೇಲ್ಮನೆಯ ಮುಖ್ಯಸ್ಥರಾಗಿರುವ ತಮ್ಮ ಹಕ್ಕಿಗೆ ಚ್ಯುತಿ ಬಂದಿರುವ ಬಗ್ಗೆ ಸಭಾಪತಿ ಬಸವರಾಜ ಹೊರಟ್ಟಿ ಅನುಮಾನ ವ್ಯಕ್ತಪಡಿಸಿದ್ದಾರೆ. ಆ ನಿಟ್ಟಿನಲ್ಲಿ ಕಾನೂನು ತಜ್ಞರು ಮತ್ತು ಕಾರ್ಯದರ್ಶಿಗಳೊಂದಿಗೆ ಸಮಾಲೋಚನೆ ನಡೆಸಲು ನಿರ್ಧರಿಸಿದ್ದಾರೆ. ಒಟ್ಟಾರೆಯಾಗಿ, ಈ ಪ್ರಕರಣದ ವಿವಿಧ ಆಯಾಮಗಳ ಪರಿಶೀಲನೆಯಲ್ಲಿ ವ್ಯಸ್ತರಾಗಿರುವ ಸಭಾಪತಿ ಬಸವರಾಜ ಹೊರಟ್ಟಿ 'ಉದಯವಾಣಿ'ಯೊಂದಿಗೆ ನೇರಾ-ನೇರ ಮಾತನಾಡಿದ್ದಾರೆ.


**• ಉತ್ತರ ಕರ್ನಾಟಕದಲ್ಲಿ ನಡೆದ ಈ ಬಾರಿಯ ಅಧಿವೇಶನ ತೃಪ್ತಿ ತಂದಿದೆಯೇ?**

ಖಂಡಿತ ತೃಪ್ತಿ ತಂದಿದೆ. ನಡಾವಳಿಯ ಬಹುತೇಕ ವಿಷಯಗಳನ್ನು ಪೂರ್ಣಗೊಳಿಸಿದ್ದೇವೆ. ಜಿಲ್ಲಾಡಳಿತವೂ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿತ್ತು. ವಿಶೇಷವಾಗಿ ಮೂರು ದಿನಗಳು ಉತ್ತರ ಕರ್ನಾಟಕ ಸಮಸ್ಯೆಗಳ ಕುರಿತು ಚರ್ಚೆ ನಡೆದಿದೆ. ರಾತ್ರಿ 10.30ರವರೆಗೆ ಮೇಲ್ಮನೆ ಕಲಾಪಗಳು ನಡೆದಿದ್ದು, ಸದಸ್ಯರೆಲ್ಲರೂ ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಇದೆಲ್ಲವೂ ನನಗೆ ವೈಯಕ್ತಿಕವಾಗಿ ತೃಪ್ತಿ ತಂದಿದೆ. ಆದರೆ, ಕೊನೆಯ ದಿನ ನಡೆದ ಘಟನೆಯು ಹೋಳಿಯಲ್ಲಿ ಹುಣಸೆಹಣ್ಣು ತೊಳೆದಂತೆ ಮಾಡಿಬಿಟ್ಟಿತು.

**• ಮೇಲ್ಮನೆಯ ಕಸ್ಟೋಡಿಯನ್ ನೀವು. ನಿಮ್ಮ ಉಪಸ್ಥಿತಿಯಲ್ಲೇ ಇಂಥದ್ದೊಂದು ಘಟನೆ ನಡೆದಿದೆ. ಇದೊಂದು ಕಪ್ಪುಚುಕ್ಕೆ ಆಯಿತಲ್ಲವೇ?**

ಕಪ್ಪುಚುಕ್ಕೆ ಹೇಗೆ ಆಗುತ್ತದೆ? ಸದನ ಮುಂದೂಡಿದ ಅವಧಿಯಲ್ಲಿ ನಡೆದ ಘಟನೆ ಇದಾಗಿದೆ. ಆದಾಗ್ಯೂ ನಾನು ಎರಡೂ ಕಡೆಯವರನ್ನು ಕರೆಸಿ ವಿಚಾರಣೆ ನಡೆಸಿ ರೂಲಿಂಗ್ ಕೊಟ್ಟಿದ್ದೇನೆ. ಅದರ ನಂತರ ಹೊರಗಡೆ ನಡೆದ ಬೆಳವಣಿಗೆಗಳಿಗೂ ನನಗೂ ಮತ್ತು ನಾನು ಕಸ್ಟೋಡಿಯನ್ ಆಗಿರುವ ಸದನಕ್ಕೂ ಸಂಬಂಧ ಇಲ್ಲ.

**• ನೀವು ರೂಲಿಂಗ್ ಕೊಟ್ಟ ನಂತರವೂ ಕೆಳಮನೆಯಲ್ಲಿ ಅದೇ ಘಟನೆಗೆ ಸಭಾಧ್ಯಕ್ಷರು ಹಕ್ಕುಬಾಧ್ಯತಾ ಸಮಿತಿಗೆ ನೀಡಿ ರೂಲಿಂಗ್ ಕೊಟ್ಟಿದ್ದಾರೆ. ಅದರ ಬಗ್ಗೆ ಏನು ಹೇಳುತ್ತೀರಿ?**



**• ಬಸವರಾಜ ಹೊರಟ್ಟಿ,**
ವಿಧಾನಪರಿಷತ್ ಸಭಾಪತಿ

ನೋಡಿ, ಇಬ್ಬರ ನಡುವೆ ವಾಕ್ಸಮರ ನಡೆದಿದೆ. ಒಬ್ಬರು ಮೇಲ್ಮನೆ ಸದಸ್ಯರಾಗಿದ್ದರೆ, ಮತ್ತೊಬ್ಬರು ಕೆಳಮನೆ ಸದಸ್ಯರಾಗಿದ್ದಾರೆ. ಹಾಗಾಗಿ, ಕೆಳಮನೆಯಲ್ಲೂ ಅದು ಪ್ರಸ್ತಾಪವಾಗಿ ರೂಲಿಂಗ್ ನೀಡಲಾಗಿದೆ. ಅದಕ್ಕೆ ಅವರು (ಸಭಾಧ್ಯಕ್ಷರು) ಅಂತಿಮವಾಗಿದ್ದರೆ, ಅಲ್ಲಿ ನಡೆದಿದ್ದಕ್ಕೆ ಮತ್ತು ಅದನ್ನು ಆಧರಿಸಿ ನೀಡುವ ತೀರ್ಪಿಗೆ ಅವರು ಸ್ವತಂತ್ರರಾಗಿದ್ದಾರೆ. ಆದರೆ, ಇಲ್ಲಿ ಮಾತ್ರ (ಮೇಲ್ಮನೆಯಲ್ಲಿ) ನಾನೇ ಫೈನಲ್.

**• ಮೇಲ್ಮನೆ ನಿಮ್ಮ ಅಧೀನದಲ್ಲೇ ಇರುವ ಆವರಣ. ನೀವೇ ಹೇಳಿದಂತೆ ರೂಲಿಂಗ್ ಕೂಡ ಕೊಟ್ಟಾಗಿತ್ತು. ನಿಮ್ಮ ಮಾತನ್ನು ಮೀರಿ ಎರಡೂ ಕಡೆಯವರು ಪೊಲೀಸರಿಗೆ ದೂರು ನೀಡಿದ್ದಾರೆ. ಅದು ಸಭಾಪತಿ ಹಕ್ಕುಚ್ಯುತಿ ಆಗುವುದಿಲ್ಲವೇ?**

ಪೊಲೀಸರಿಗೆ ಕೊಟ್ಟ ದೂರಿನಲ್ಲಿ ವಿಧಾನ ಪರಿಷತ್ತಿನಲ್ಲಿ ನಡೆದ ಘಟನೆ ಅಂತ ಉಲ್ಲೇಖಿಸಲಾಗಿದೆ. ಪರಿಷತ್ತಿನಲ್ಲಿ ಎಂದು ಉಲ್ಲೇಖಿಸಿರುವುದೇ ತಪ್ಪು. ಮತ್ತೊಂದೆಡೆ ನಾನು ರೂಲಿಂಗ್ ನೀಡಿದ ಘಟನೆ ಬಗ್ಗೆಯೇ ದೂರು ದಾಖಲಾಗಿದೆ. ಈ ಹಿನ್ನೆಲೆಯಲ್ಲಿ ಸಭಾಪತಿ ಹಕ್ಕಿಗೆ ಚ್ಯುತಿ ಬಂದಿದೆಯೇ ಎಂಬುದರ ಕುರಿತು ಕಾನೂನು ತಜ್ಞರೊಂದಿಗೆ ಪರಿಶೀಲನೆ ಮಾಡಿ ಮುಂದಿನ ಕ್ರಮ ಕೈಗೊಳ್ಳುತ್ತೇನೆ.

**• ಈಗ ಸ್ಥಳ ಮಹಜರು ಮಾಡಲು ಅವಕಾಶ ಇಲ್ಲ ಅನ್ನುತ್ತಿದ್ದೀರಿ. ಹಾಗಿದ್ದರೆ, ತನಿಖೆಗೆ ಅಡ್ಡಿಪಡಿಸಿದಂತೆ ಆಗುವುದಿಲ್ಲವೇ? ಅಷ್ಟಕ್ಕೂ ಪೊಲೀಸರು ಸದನದ ಮಹಜರು ಮಾಡಲು ನಿಯಮಗಳಲ್ಲಿ ಅವಕಾಶ ಇದೆಯೇ?**

ನನಗೆ ಗೊತ್ತಿರುವಂತೆ ನಿಯಮದಲ್ಲಿ ಇದಕ್ಕೆ ಅವಕಾಶ ಇದ್ದಂತಿಲ್ಲ. ಸದನದೊಳಗೆ ಪೊಲೀಸರು ಬರುವಂತಿಲ್ಲ. ಒಂದು ವೇಳೆ ಬಂದರೆ ಪೊಲೀಸರೇ ಜೈಲಿಗೆ ಹೋಗುತ್ತಾರೆ. ಆದಾಗ್ಯೂ ಮತ್ತೊಮ್ಮೆ ಈ ವಿಚಾರದಲ್ಲಿ ನಾನು ಕಾರ್ಯದರ್ಶಿಗಳೊಂದಿಗೆ ಚರ್ಚಿಸಿ, ನಿಯಮಗಳು ಏನು ಹೇಳುತ್ತವೆ ಅಂತ ನೋಡಿ ಕಾನೂನು ರೀತಿ ಕ್ರಮ ಕೈಗೊಳ್ಳುತ್ತೇನೆ.

**• ಇಡೀ ಘಟನೆ ಮತ್ತು ನಂತರದ ಬೆಳವಣಿಗೆಗಳ ಬಗ್ಗೆ ನೀವು ಕೊಟ್ಟ ತೀರ್ಪು ತೃಪ್ತಿ ತಂದಿದೆಯೇ?**

ಇಲ್ಲಿ ಮತ್ತೊಮ್ಮೆ ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ಮುಖ್ಯವಾಗಿ ಈ ಘಟನೆ ನಡೆಯಬಾರದಿತ್ತು, ನಡೆದು ಹೋಗಿರುವುದು ವಿಷಾದನೀಯ. ಘಟನೆ ನಡೆದಾಗ ನಾನು ಇರಲಿಲ್ಲ. ಒಂದು ವೇಳೆ ನಾನು ಇದ್ದಿದ್ದರೆ, ಅಷ್ಟೆಲ್ಲಾ ವಾಗ್ವಾದಕ್ಕೆ ಅವಕಾಶವನ್ನೂ ಕೊಡುತ್ತಿರಲಿಲ್ಲ. ಘಟನೆ ನಡೆದ ತಕ್ಷಣ ನನಗೆ ಲಭ್ಯವಾದ ಮಾಹಿತಿಯನ್ನು ಆಧರಿಸಿ ಸೂಚನೆ ನೀಡಿದ್ದೇನೆ.

**• ವಿಚಾರಣೆ ನಡೆಸಿರುವುದಾಗಿ ಹೇಳಿದಿರಿ. ಹಾಗಿದ್ದರೆ, ಆ ವೇಳೆ ಸಿ.ಟಿ. ರವಿ ತಮ್ಮ ಮೇಲಿನ ಆರೋಪವನ್ನು ಒಪ್ಪಿಕೊಂಡರಾ?**

ಮೊದಲು ಸಚಿವರು ತಮ್ಮ ವಿರುದ್ಧ ಅಶ್ಲೀಲ ಪದ ಬಳಕೆ ಮಾಡಿರುವುದಾಗಿ ರವಿ ವಿರುದ್ಧ ನನ್ನ ಬಳಿ ದೂರು ಕೊಟ್ಟರು. ತಕ್ಷಣ ನಾನು ರವಿಯನ್ನು ಕರೆಸಿ, ನಿನ್ನ ಮೇಲೆ ಇಂಥದ್ದೊಂದು ಕಂಪ್ಲೇಂಟ್ ಬಂದಿದೆ ಅಂತ ಕೇಳಿದಾಗ, 'ನನಗೂ ಅವರು (ಸಚಿವರು) ಅವಹೇಳನಕಾರಿಯಾಗಿ ಬೈದಿದ್ದಾರೆ ಸರ್, ಬೇಕಿದ್ದರೆ ಕರೆದು ಕೇಳಿ' ಅಂದರು. ನಾನು ಆಗ ಮಾಹಿತಿ ತರಿಸಿಕೊಂಡೆ. ಇದಿಷ್ಟೇ ನನಗೆ ಗೊತ್ತಿರುವುದು.

**• ಚಿಂತಕರ ಚಾವಡಿಯಲ್ಲಿ ಇತ್ತೀಚೆಗೆ ಇಂಥ ಅಹಿತಕರ ಘಟನೆಗಳಿಗೆ ಸಾಕ್ಷಿಯಾಗುತ್ತಲೇ ಇದೆ. ಹಾಗಿದ್ದರೆ, ಇನ್ನಷ್ಟು ಕಠಿಣ ನಿಯಮಗಳನ್ನು ರೂಪಿಸುವ ಅವಶ್ಯಕತೆ ಇದೆಯೇ?**

ಈಗಿರುವ ನಿಯಮಗಳೆಲ್ಲವೂ ಸರಿಯಾಗಿವೆ. ಆದರೆ, ಅದರಂತೆ ನಡೆದುಕೊಳ್ಳುವುದು ಕಡಿಮೆ ಆಗುತ್ತಿದೆ ಎಂಬುದೇ ಬೇಸರದ ಸಂಗತಿ. ನನ್ನ ಪ್ರಕಾರ ನಿಯಮಗಳ ಬದಲಾವಣೆ ಅವಶ್ಯಕತೆ ಇಲ್ಲ. ಹಿರಿಯರ ಮನೆ ಅದು. ಅದರ ಘನತೆಗೆ ಧಕ್ಕೆ ಬಾರದಂತೆ ನಡೆದುಕೊಳ್ಳುವ ಕರ್ತವ್ಯ ನಮ್ಮೆಲ್ಲರದ್ದಾಗಿದೆ. ಮುಂದಿನ ದಿನಗಳಲ್ಲಿ ಇಂಥ ಘಟನೆಗಳು ಮರುಕಳಿಸದಂತೆ ಎಲ್ಲರೂ ಎಚ್ಚರವಹಿಸಬೇಕು.

# ಸಭಾಪತಿ ಸ್ಥಾನಕ್ಕೆ ಕಾಂಗ್ರೆಸ್‌ನಿಂದ ಅಪಮಾನ: ಛಲವಾದಿ ಆರೋಪ

## ಕಾಂಗ್ರೆಸ್ಸಿಗರು ಸಭಾಪತಿ ಬಸವರಾಜ ಹೊರಟ್ಟಿ ಕ್ಷಮೆ ಕೇಳಲಿ

■ **ಉದಯವಾಣಿ ಸಮಾಚಾರ**

**ಬೆಂಗಳೂರು:** ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರನ್ನು ಭಯೋತ್ಪಾದಕನಿಗಿಂತ ಕೆಟ್ಟದಾಗಿ ನಡೆಸಿಕೊಂಡಿರುವ ಕಾಂಗ್ರೆಸ್ ಸರ್ಕಾರ, ಸಭಾಪತಿ ಬಸವರಾಜ ಹೊರಟ್ಟಿ ಅವರ ಆದೇಶವನ್ನೇ ಪ್ರಶ್ನಿಸುತ್ತಿದೆ. ಇದು ಸಭಾಪತಿ ಸ್ಥಾನಕ್ಕೆ ಮಾಡಿದ ಅಪಮಾನ. ಈ ವಿಚಾರದಲ್ಲಿ ಕಾಂಗ್ರೆಸಿಗರು ಸಭಾಪತಿಯವರ ಕ್ಷಮೆ ಕೇಳಬೇಕೆಂದು ಮೇಲ್ಮನೆ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದರು.

ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, ಸದನದಲ್ಲಿ ಅಂದು ಏನು ನಡೆಯಿತು ಎಂಬುದು ಯಾರಿಗೂ ಗೊತ್ತಿಲ್ಲ. ಇದ್ದಕ್ಕಿದ್ದಂತೆ ರವಿ ತಮ್ಮ ವಿರುದ್ಧ ಅವಾಚ್ಯ ಬಳಸಿದ್ದಾರೆಂದು ಸಭಾಪತಿಯವರಿಗೆ ದೂರು ಕೊಡಲು ಹೋದರು. ಕಲಾಪ ಮುಂದೂಡಿಕೆ ನಂತರ ಊಟ ಮಾಡಿ ಬರುವಾಗ ರವಿ ಮೇಲೆ ದಾಳಿ ಆಯಿತು. ಮಾಹಿತಿ ನೀಡಲು ಆರ್.ಅಶೋಕ್ ಅವರನ್ನು ಭೇಟಿ ಮಾಡಿ ಬರುವ ವೇಳೆಗೆ ಸಚಿವೆ ಹೆಬ್ಬಾಳ್ಕರ್ ಆಪ್ತ ಸಹಾಯಕ ಸೇರಿ 200ಕ್ಕೂ ಹೆಚ್ಚು ಜನ ನುಗ್ಗಿ ಸುವರ್ಣದ್ವಾರದ ಗೇಟ್‌ಗಳನ್ನು ಒದೆಯುತ್ತಿದ್ದರು ಎಂದರು.

> ಸದನದೊಳಗೆ ಪೊಲೀಸ್ ಪ್ರವೇಶಿಸುವುದು, ಸಿಐಡಿ ತನಿಖೆಗೆ ಕೊಡುವ ವ್ಯರ್ಥ ಪ್ರಯತ್ನಗಳನ್ನು ಮಾಡಬೇಡಿ. ಸಭಾಪತಿಯ ಆದೇಶವನ್ನು ಗೌರವಿಸಿ. ಇಲ್ಲಿಗೇ ಬಿಟ್ಟರೆ ರಾಜ್ಯಕ್ಕೆ, ಸರ್ಕಾರಕ್ಕೂ ಒಳ್ಳೆಯದು. ಧರ್ಮಸ್ಥಳಕ್ಕೆ ಹೋದ ಬಹಳ ಜನರನ್ನು ನೋಡಿದ್ದೇನೆ. ಮಾಡಿದ ಪಾಪ ಆಡಿದವನ ಬಾಯಲ್ಲಿ. ಮಂಜುನಾಥನಿಗೆ ಏಕೆ ಕಟ್ಟುತ್ತೀರಿ? ಮಂಜುನಾಥನಿಗೆ ಬರುವುದು ಬೇಡ.
>
> ● **ಛಲವಾದಿ ನಾರಾಯಸ್ವಾಮಿ,**
> **ಮೇಲ್ಮನೆ ವಿಪಕ್ಷ ನಾಯಕ**

ಹೊರಟ್ಟಿ ಅವರು ಎಡಿಜಿಪಿಯನ್ನು ಕರೆಸಿ, ರಕ್ಷಣೆ ಕೊಡಲು ಸೂಚಿಸಿದರು. ಹೊರಬರುವಷ್ಟರಲ್ಲಿ ಸಿ.ಟಿ. ರವಿಯನ್ನು ಪೊಲೀಸರು ಬೇರೆ ವಾಹನದಲ್ಲಿ ಎತ್ತಾಕಿಕೊಂಡು ಹೊರಟರು. ಭಯೋತ್ಪಾದಕರಿಗಿಂತ ಕೆಟ್ಟದಾಗಿ ನಡೆಸಿಕೊಂಡರು. ಎಂದು ಹೇಳಿದರು.

# ಪರಿಷತ್ತಲ್ಲಿ ನಡೆದ ಘಟನೆ ಎಂದು ಉಲ್ಲೇಖಿಸಿದ್ದು ತಪ್ಪು: ಹೊರಟ್ಟಿ

## ಸಿಐಡಿಗೆ ಆದೇಶಿಸಿರುವುದು ನಮ್ಮ ವ್ಯಾಪ್ತಿಗೆ ಬರಲ್ಲ: ಸಭಾಪತಿ

■ **ಉದಯವಾಣಿ ಸಮಾಚಾರ**

**ಹುಬ್ಬಳ್ಳಿ:** ರಾಜ್ಯ ಸರ್ಕಾರ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಪ್ರಕರಣ ಸಿಐಡಿಗೆ ಆದೇಶಿಸಿರುವುದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಆದರೆ, ಪ್ರಕರಣ ಸಿಐಡಿಗೆ ವಹಿಸುವಾಗ ಪೊಲೀಸರು 'ವಿಧಾನ ಪರಿಷತ್‌ನಲ್ಲಿ ನಡೆದ ಘಟನೆ' ಎಂದು ಉಲ್ಲೇಖಿಸಿದ್ದು ತಪ್ಪು. ಅದನ್ನು ಪರಿಶೀಲಿಸುತ್ತಿದ್ದೇವೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.


ಸುದ್ದಿಗಾರರ ಜತೆ ಮಾತನಾಡಿ, ಘಟನೆ ಸದನದ ಮುಂದೆ ನಡೆದಿದೆ. ಅದನ್ನೀಗ ಸಿಐಡಿಗೆ ಕೊಟ್ಟಿರುವುದಾಗಿ ಗೃಹ ಸಚಿವರು ಹೇಳುತ್ತಿದ್ದಾರೆ. ಸ್ಥಳ ಮಹಜರು ಕುರಿತು ಬೆಳಗಾವಿ ಪೊಲೀಸ್ ಆಯುಕ್ತರು ಪತ್ರ ಬರೆದಿದ್ದಾರೆ. ಅಂತಹ ಪರಿಸ್ಥಿತಿ ಎದುರಾದರೆ ನಮ್ಮದೇ ನಿಯಮದ ಪ್ರಕಾರ ಅವಕಾಶ ಮಾಡಿಕೊಡುತ್ತೇವೆ. ಕಾನೂನು ವ್ಯಾಪ್ತಿ ಬಿಟ್ಟು ನಾವು ಏನೂ ಮಾಡಲಾಗುವುದಿಲ್ಲ. ಪ್ರಕರಣವು ಸದನ ಮುಂದೂಡಿದಾಗ ನಡೆದಿದ್ದರೂ ಪರಿಷತ್‌ನಲ್ಲಿಯೇ ನಡೆದಿರುವುದು. ಆದರೆ, ಸರ್ಕಾರ ಸದನದ ಹೊರಗೆ ನಡೆದ ಪ್ರಕರಣವೆಂದು ಸಿಐಡಿಗೆ ವಹಿಸಿದೆ ಎಂದು ತಿಳಿದು ಬಂದಿದೆ. ಏನೇ ಕ್ರಮ ಕೈಗೊಳ್ಳುವುದಿದ್ದರೂ ಸಭಾಪತಿ ಅನುಮತಿ ಬೇಕಾಗುತ್ತದೆ ಎಂದರು.

# CID inquiry is discretion of State government, says Horatti

Legislative Council Chairman says Parliament Secretary and Advocate General are deliberating on the matter and ascertaining what the Council regulations mandate, and further action would be taken on their advice

**The Hindu Bureau**
HUBBALLI

Legislative Council Chairman Basavaraj Horatti on Tuesday said that the decision of the State government to hand over the case pertaining to BJP member C.T. Ravi's alleged derogatory remarks against Women and Child Development Minister Laxmi Hebbalkar to the CID was the discretion of the government and it did not come under the purview of the Upper House.



Basavaraj Horatti

Speaking to presspersons in Hubballi on Tuesday, the Chairman, however, said that the reported mention about "the incident in Legislative Council" in the terms of reference for the CID was wrong and it should not have been mentioned.

Mr. Horatti said that the Parliament Secretary and the Advocate General were already deliberating on the matter and ascertaining what the Council regulations mandated. The issue of allowing the spot mahazar in the Legislative Council as sought by the Police Commissioner was also being looked into.

On his statement that the matter was a "closed chapter", the Chairman clarified that it was pertaining to the complaints filed by Ms. Hebbalkar on which he had already given his ruling.

"However, if there is any fresh complaint by either of the parties, including Ms. Hebbalkar, it would be verified and further action taken. As of now I have not received any fresh representation or plea by the Minister. If submitted it will be verified," he said. To a query, he said that if any audio-video documents were submitted they would be sent to the Forensic Science Laboratory (FSL) to ascertain the veracity.

The Chairman said that the Legislative Council had never witnessed such an incident. "Rather than looking at the issue considering Ms. Hebbalkar as a Minister, we should look at the incident from the point of view of a woman. As a woman, she is deeply hurt. At the same time police action against Mr. Ravi in a reportedly inhuman manner is also wrong," he said.

He maintained that the CID probe had nothing to do with the incident in the Legislative Council. The Minister had given a complaint of atrocity on a woman, based on which a case had been registered and now the CID probe had been ordered.

Based on advice of the Secretary and the Advocate General, further decisions would be taken, he said.

The Chairman also said that he had also reported the matter to the Governor as he had also sought information on the same.

## Police chief transfers two cases to CID

**The Hindu Bureau**
BENGALURU

The State police chief transferred two cases pertaining to the fracas at the Suvarna Soudha, Belagavi, to the Criminal Investigation Department (CID) on Tuesday.

The first case is the one booked against C.T. Ravi, MLC, for calling Women and Child Development Minister Laxmi Hebbalkar a derogatory word inside the Council. He was arrested by the Belagavi police and was released on interim bail by the High Court of Karnataka.

Meanwhile, Mr. Ravi lodged a complaint alleging he was attacked by supporters of Ms. Hebbalkar in the Suvarna Soudha. Over 10 persons have been booke. This case has also been transferred to the CID.